ಇ) ದೊಡ್ಡಕೆರೆ ಮೈದಾನದಲ್ಲಿ ೫೬ ಮಳಿಗೆಗಳ ಖಾಯಂ ಪೆವಿಲಿಯನ್ ಕಟ್ಟಡ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ. ಮುಖ್ಯ ಪ್ರವೇಶದ್ವಾರದ ನಿರ್ಮಾಣ ಕಾರ್ಯ ಪ್ರಗತಿಯ ಹಂತದಲ್ಲಿದೆ ಖಾಯಂ ವಸ್ತುಪ್ರದರ್ಶನ ಕಟ್ಟಡಕ್ಕೋಸ್ಕರ ಕಾನ್ಸ್‌ಪ್ಟ್ ಪ್ಲಾನ್ ತಯಾರಿಸ ಲಾಗುತ್ತಿದೆ.

ಈ) ಈ ಬಗ್ಗೆ ಯೋಜನೆ ತಯಾರಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಬೈಂದೂರು ಕ್ಷೇತ್ರದಲ್ಲಿ ನಲ್ಲಿ ನೀರು ಸರಬರಾಜು ಯೋಜನೆ

೪೭೮ (೭೭೪) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬೈಂದೂರು ಕ್ಷೇತ್ರದ ಹೆಮ್ಮಾಡಿ, ಕಂಬದಕೋಣೆ, ವಂಡ್ಸೆ, ನಾಡಹಡವುನಲ್ಲಿ ತೀವ್ರ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಸುರಕ್ಷಿತ ನಲ್ಲಿ ನೀರು ಸರಬರಾಜಿಗೆ ಆ ಕೇಂದ್ರದಲ್ಲಿ ಯಾವ ಕ್ರಮ ಕೈ ಕೊಳ್ಳಲಾಗುವುದು ಮತ್ತು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಬಂದಿದೆ.

ಆ) ವಂಡ್ಸೆ: ಗ್ರಾಮದ ನಳದ ನೀರು ಸರಬರಾಜು ಯೋಜನೆ ಕಾರ್ಯ ನಡೆಯುತ್ತಿದೆ. ೧೯೮೯–೯೦ನಲ್ಲಿ ಮುಗಿಯುವ ನೀರಿಕ್ಷೆ ಇದೆ. ಹೆಮ್ಮಾಡಿ: ಮತ್ತು ನಾಡ ಗ್ರಾಮಗಳನ್ನು ೧೯೮೯–೯೦ನೇ ಸಾಲಿನ ನಲ್ಲಿ ನೀರು ಸರಬರಾಜು ಯೋಜನೆಯಡಿಯಲ್ಲಿ ಸೇರಿಸಲಾಗಿದೆ. ಕಂಬದಕೋಣೆ ಮತ್ತು ಹಡವು ಗ್ರಾಮಗಳಿಗೆ ನಲ್ಲಿ ನೀರು ಸರಬರಾಜು ಯೋಜನೆ ಒದಗಿಸುವ ಬಗ್ಗೆ ಪರಿಶೀಲಿಸ ಲಾಗುವುದು.

ಇಂದಿರಾ ಆವಾಜ್ ಯೋಜನೆಯ ಮನೆಗಳು

೪೦೨ (೪೭೯) ಶ್ರೀ ಯು. ಭೂಪತಿ.—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ೧೯೮೭–೮೮ ಹಾಗೂ ೮೮–೮೯ರಲ್ಲಿ ಇಂದಿರಾ ಆವಾಜ್ ಯೋಜನೆಗಾಗಿ ನಿಗದಿಯಾದ ಹಣವೆಷ್ಟು ಹಾಗೂ ಬೆಚ್ಚಮಾಡಿದ ಹಣವೆಷ್ಟು ?

ಆ) ಸದರಿ ಯೋಜನೆಯನ್ನು ಅನುಷ್ಠಾನ ಗೊಳಿಸುವಲ್ಲಿ ಪಾಲಿಸಬೇಕಾದ ನಿಯಮಗಳೇನು ?

ಇ) ಸದರಿ ಯೋಜನೆಯಲ್ಲಿ ಸಂಪೂರ್ಣ ಗುರಿ ಸಾಧಿಸಲಾಗಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ)

		(ಲಕ್ಷ ರೂ.ಗಳಲ್ಲಿ)
	೧೯೮೭–೮೮	೧೯೮೮–೮೯
೧) ನಿಗದಿಯಾದ ಹಣ	೬೧೪.೦೦೦	೬೦೮.೨೪೦
೨) ಬೆಚ್ಚ ಮಾಡಿದ ಹಣ	೬೧೪.೦೦೦	೬೮.೫೮೦

ಆ) ೧, ಈ ಯೋಜನೆಯ ಫಲಾನುಭವಿಗಳು ಗೃಹ ರಹಿತರಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು ಅಥವಾ ಜೀತ ವಿಮುಕ್ತರ ಗುಂಪಿಗೆ ಸೇರಿರಬೇಕು. ಇದರ ಆಯ್ಕೆಯು ಮಂಡಲ ಮತ್ತು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಸೇರಿದೆ.

೨. ಪ್ರತಿ ಬ್ಲಾಕ್ ಅಥವಾ ಘಟಕದಲ್ಲಿ ಆದಷ್ಟು ಮಟ್ಟಿಗೆ ೨೦ ನಿವೇಶನಗಳು ಒಂದೇ ಜಾಗದಲ್ಲಿರಬೇಕು.

೩. ಗೋಡೆಗಳೂ ನೇರಿದಂತೆ, ಮನೆಯ ವಿಸ್ತೀರ್ಣ ೨೦.೯ ಸದರ ಮೀಟರ್‌ಗಳಾಗಿರ ಬೇಕು.

೪. ಕಡಿಮೆ ವೆಚ್ಚದಲ್ಲಿ ಸ್ಥಳೀಯವಾಗಿ ದೊರೆಯುವ ಸಾಮಾನುಗಳನ್ನು ಉಪಯೋಗಿಸಿ ಅತಿ ಕಡಿಮೆ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಬೇಕು.

೫) ಈ ಯೋಜನೆಯಲ್ಲಿ ೨ನೇ ಹಂತದ ೧೯೮೬–೮೭ ೮೭–೮೮ರ ಒಳಗೆ ಒಟ್ಟು ೧೦೬೦೮ ಮನೆಗಳನ್ನು ತೆಗೆದುಕೊಂಡಿದ್ದು, ಅವುಗಳಲ್ಲಿ ೩೧೦ ಮನೆಗಳನ್ನು ಮಾತ್ರ ಪೂರ್ಣಗೊಳಿಸಬೇಕಾಗಿದೆ. ಇವುಗಳು ವಿವಿಧ ಹಂತದಲ್ಲಿರುತ್ತದೆ. ೧೯೮೮–೮೯ನೇ ಸಾಲಿನಲ್ಲಿ ೩ನೇ ಹಂತದ ೧೯೮೭–೮೮ರಲ್ಲಿ ಮಂಜೂರಾದ ೫೨೧೬ ಮನೆಗಳ ನಿರ್ಮಾಣ ಕಾರ್ಯವು ವಿವಿಧ ಹಂತಗಳಲ್ಲಿದೆ.

ತುಮಕೂರು ನಗರದ ಬಾಳನ ಕಟ್ಟೆಯ ಪರಿಸರದ ಬಗ್ಗೆ

೭೯೨ (೪೪೦) ಶ್ರೀ ಶಿವಸಂಜಪ್ಪ, (ಗುಬ್ಬಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

೧) ತುಮಕೂರು ನಗರದ ಬಾಳನಕಟ್ಟೆ ಮೈದಾನದಲ್ಲಿ ರಂಗಮಂದಿರವನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಇದರ ಸುತ್ತಲೂ ಅಂಗಡಿ ಮಳಿಗೆಗಳನ್ನು ಕಟ್ಟಲು ನಗರಸಭೆಯವರು ತೀರ್ಮಾನ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩) ಅಂಗಡಿ ಮಳಿಗೆಗಳನ್ನು ಕಟ್ಟಿದಂತೆ ಸಾರ್ವಜನಿಕರಿಂದ ಮನವಿಗಳು ಬಂದಿದೆಯೇ ?

೪) ಅಂಗಡಿ ಮಳಿಗೆಗಳನ್ನು ಕಟ್ಟಿದರೆ ರಂಗ ಮಂದಿರದ ಪರಿಸರ ಹಾಳಾಗುವುದಿಲ್ಲವೆ ? ಹಾಗಿದ್ದಲ್ಲಿ ಇದನ್ನು ತಡೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೧) ಹೌದು.

೨) ಹೌದು.

೩) ಹೌದು.

೪) ಇಲ್ಲ.

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಬಾಕಿ ವಸೂಲಿಗಾಗಿ ಜನತಾ ಮನೆಗಳನ್ನು ಹರಾಜು ಹಾಗು ಜಪ್ತಿ ಮಾಡುತ್ತಿರುವುದು

೭೯೪ (೪೪೧) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

೧) ಬಾಕಿ ವಸೂಲಿಗಾಗಿ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಜನತಾ ಮನೆಗಳನ್ನು ಹರಾಜು ಹಾಗೂ ಜಪ್ತಿ ಮಾಡಲಾಗಿದೆ ?

೨) ಇದರಿಂದ ವಸೂಲಾಗಿರುವ ಹಣವೆಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಬಾಕಿ ವಸೂಲಿಗಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಯಾವ ಜನತಾ ಮನೆಗಳನ್ನೂ ಸಹ ಹರಾಜು ಹಾಗೂ ಜಪ್ತಿ ಮಾಡಲಾಗಿರುವುದಿಲ್ಲ.

೨) ಉದ್ಭವಿಸುವುದಿಲ್ಲ.